ಇಂದು ದಿಃ 07.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಕೆ.ಬಿ. ವಕೀಲರಿಂದಃ

ಮೈಸೂರಿನ ಸಬರ್-ಬನ್ ಬಸ್ಸ ನಿಲ್ದಾಣದ ಪ್ಲಾಟ್ ಫಾರ್ಮ್ ನಂಬರ್ 7 ರಲ್ಲಿ ಅಪಘಾತವಾಗಿದೆ. ಆ ಸಮಯದಲ್ಲಿ ನನಗೆ ನಿದ್ರೆ ಮಂಪರು ಇರಲಿಲ್ಲ. ಪ್ಲಾಟ್ ಫಾರ್ಮ್ ನಿಂದ ಬಸ್ಸು ಮುಂದಕ್ಕೆ ಹೋಗುತ್ತಿದ್ದಾಗ ನನಗೆ ಅಪಘಾತವಾಯಿತು. ನಾನು ಬಸ್ಸಿನ ಎಡಭಾಗದಿಂದ ಹತ್ತಬೇಕಾಗಿತ್ತು. ಎಡಭಾಗದಲ್ಲಿ ಹತ್ತಬೇಕಾಗಿತ್ತು ಎಂಬುದು ನನಗೆ ಗೊತ್ತಿತ್ತು. ಆ ಸಮಯದಲ್ಲಿ ಪಿರಿಯಾಪಟ್ಟಣಕ್ಕೆ ಬರುವ ಬಸ್ಸು ಇನ್ನೊಂದು ಪುತ್ತೂರಿಗೆ ಹೊರಡುವ ಬಸ್ಸು ಇತ್ತು. ಪಿರಿಯಾಪಟ್ಟಣಕ್ಕೆ ಹೋಗುವ ಬಸ್ಸು ಬಂದು ನಿಂತಿತ್ತು. ಆ ಬಸ್ಸಿಗೆ ನಾನು ಹತ್ತಲು ಹೋಗುತ್ತಿದ್ದಾಗ ಕೆಎ 21 ಎಫ್ 0274 ಬಸ್ಸು ನನಗೆ ಅಪಘಾತಪಡಿಸಿದೆ. ಪಿರಿಯಾಪಟ್ಟಣಕ್ಕೆ ಹೊರಡಲು ನಿಂತಿದ್ದ ಬಸ್ಸಿನ ಸಂಖ್ಯೆ ಗೊತ್ತಿಲ್ಲ. ಪಿರಿಯಾಪಟ್ಟಣಕ್ಕೆ ಹೋಗುವ ಬಸ್ಸಿಗೆ ನಾನು ಹೋಗುತ್ತಿದ್ದಾಗ ಮೇಲೆ ಹೇಳಿದ ಸಂಖ್ಯೆಯ ಬಸ್ಸು ಬಂದು ಅಪಘಾತಪಡಿಸಿರುವುದಾಗಿ ನನ್ನ ದೂರಿನಲ್ಲಿ ಹೇಳಿದ್ದೇನೆ.

ನನ್ನನ್ನು ಹೊರತುಪಡಿಸಿ ಸುಮಾರು 15-20 ಜನ ಪಿರಿಯಾಪಟ್ಟಣಕ್ಕೆ ಹೋಗುವ ಬಸ್ಸಿಗೆ ಹತ್ತುತ್ತಿದ್ದರು. ಪಿರಿಯಾಪಟ್ಟಣಕ್ಕೆ ಹೊರಡುವ ಬಸ್ಸಿಗೆ 2-3 ಜನ ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಾನು ಹತ್ತಬೇಕಾಗಿದ್ದ ಬಸ್ಸು ಚಾಲನೆಯಲ್ಲಿರಲಿಲ್ಲ ನಿಂತಿತ್ತು. ಚಿಟ್ಟೇನಹಳ್ಳಿಗೆ ಹೋಗುವ ಬಸ್ಸ ನಿಲ್ದಾಣಕ್ಕೆ ಬಂದಿರಲಿಲ್ಲ ಎಂದರೆ ಸುಳ್ಳು. ನನ್ನ ಬಳಿ ಬಸ್ಸ ಟಿಕೆಟ್ ಇರುವುದಿಲ್ಲ ಏಕೆಂದರೆ ನಾನು ಇನ್ನೂ ಬಸ್ಸು ಹತ್ತಿರುವುದಿಲ್ಲ. ಚಿಟ್ಟೇನಹಳ್ಳಿ ಬಸ್ಸ ಬಗ್ಗೆ ದೂರಿನಲ್ಲಿ ಪ್ರಸ್ತಾಪ ಮಾಡಿಲ್ಲ ಎಂದರೆ ಸುಳ್ಳು. ನಿದ್ದೆ ಮಂಪರಿನಿಂದ ನಾನೇ ಹೋಗಿ ಪುತ್ತೂರು ಭಾಗದ ಗಾಡಿಗೆ ಡಿಕ್ಕಿ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಆ ಬಸ್ಸಿನ ಚಾಲಕ ಮತ್ತು ಕಂಡಕ್ಟರ್ ನನ್ನನ್ನು ಮಾನವೀಯತೆ ದೃಷ್ಟಿಯಿಂದ ನನ್ನನ್ನು ಆಸ್ಪತ್ರೆಗೆ

ಸೇರಿಸಿದ್ದರು ಎಂದರೆ ಸರಿ. ನನ್ನ ನಿರ್ಲಕ್ಷ್ಯತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಬಸ್ಸಿನ ಚಾಲಕನ ನಿರ್ಲಕ್ಷ್ಯತೆಯಿಂದ ಅಪಘಾತವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸಾ ವೆಚ್ಚವನ್ನು ಕೆ.ಎಸ್.ಆರ್.ಟಿ.ಸಿ., ಇಲಾಖೆಯವರೇ ರೂ.2,30,314/- ಭರಿಸಿದ್ದಾರೆ ಎಂದರೆ ಸರಿ. ಮೈಸೂರಿನ ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು ಚಿಕಿತ್ಸಾ ವೆಚ್ಚವನ್ನು ಪಡೆದುಕೊಂಡ ನಂತರ ಯಾವುದೇ ಪರಿಹಾರ ಕೇಳುವುದಿಲ್ಲ ಎಂದು ಬರೆದುಕೊಟ್ಟಿದ್ದೇನೆ ಎಂದರೆ ಸುಳ್ಳು. ಆ ರೀತಿ ನಾನು ಬರೆದುಕೊಟ್ಟಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸಾ ವೆಚ್ಚವನ್ನು ಕೊಟ್ಟಿರುವ ಬಗ್ಗೆ ನನ್ನ ಅರ್ಜಿಯಲ್ಲಿ ಹೇಳಿದ್ದೇನೆ. ಇನ್ನೂ ಹೆಚ್ಚಿನ ಪರಿಹಾರ ಪಡೆಯಬೇಕೆಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ಪೊಲೀಸ್ ಠಾಣೆಯವರೊಡನೆ ಶಾಮೀಲಾಗಿ ದೂರು ಮತ್ತು ಚಾರ್ಜ್ ಶೀಟ್ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವೈದ್ಯರಿಗೆ ಪ್ರಭಾವ ಬೀರಿ ಹೆಚ್ಚಿನ ಮೊತ್ತಕ್ಕೆ ಬಿಲ್ಲುಗಳನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯಲು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತೆಯಿಂದಲೇ ಅಪಘಾತವಾಗಿರುವುದರಿಂದ ಎದುರುದಾರರು ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸುಳ್ಳು. ಆಪಾದಿತ ವಾಹನದ ಚಾಲಕನನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**